(2) ಮಂಗಳೂರು ಪ್ರಾಧಿಕಾರವರ್ಗದವರ ಮಾಸ್ಟರ್ ಪ್ಲಾನ್‌ನಿಂದ ಗ್ರಾಮನಿವಾಸಿಗಳಿಗೆ ಆಗಿರುವ ಅನ್ಯಾಯ

ಶ್ರೀ ಬಿ.ಎಂ. ಇದಿನಬ್ಬ.—ಅಧ್ಯಕ್ಷರೆ, ಮಂಗಳೂರು ಯೋಜನಾ ಪ್ರಾಧಿಕಾರದವರು ಮಾಸ್ಟರ್ ಪ್ಲಾನ್ ಮಾಡಿ ಇಷ್ಟರಲ್ಲೇ ಪ್ರಕಟಗೊಳಿಸಿರುತ್ತಾರೆ. ಇದರಲ್ಲಿ ಮಂಗಳೂರು ಮಹಾನಗರಪಾಲಿಕೆಗೆ ಶಾಮಿಲುಗೊಂಡಿರುವ ಅನೇಕ ಗ್ರಾಮಗಳ ಜನರಿಗೆ ತುಂಬಾ ಅನ್ಯಾಯವಾಗಿರುತ್ತದೆ. ಈ ಪ್ಲಾನ್ ತಯಾರಿಸುವಾಗ ಗ್ರಾಮದ ಮುಂಖಂಡರೊಡನೆ ಯಾವುದೇ ವಿಚಾರ ವಿನಿಮಯ ಮಾಡದೆ ಅಧಿಕಾರಿಗಳೇ ಕುಳಿತು ಸಿದ್ಧಗೊಳಿಸಿದ್ದಾರೆ.. ಕಂಕನಾಡಿ, ಬಜಾಲ್ ಗ್ರಾಮದಲ್ಲಿ ಳಿಗೆ ಎಕರೆ ಭೂಮಿಯನ್ನು ಪಾರ್ಕ್‌ಗಾಗಿ ವಿಾಸಲಾಗಿಡಲಾಗಿದೆ. ಇಲ್ಲಿ ಸುಮಾರು ೧೪೦ ಮನೆಗಳಿವೆ. ಅದೇ ರೀತಿ ಸೋಮೇಶ್ವರ ಗ್ರಾಮದಲ್ಲಿ ಮನೆಗಳಿರುವ ಸ್ಥಳಗಳನ್ನು ಕೈಗಾರಿಕೆಗೆ ಇಡಲಾಗಿದೆ.

ಆದಕಾರಣ ಕಂಕನಾಡಿ, ಬಜಾಲ್‌ನಲ್ಲಿ ಮನೆಗಳಿರುವ ಜಾಗವನ್ನು ಮನೆ, ನಿವೇಶನಗಳಿಗಾಗಿ ವಿಾಸಲಿಟ್ಟು ಉಳಿದ ಭೂಮಿಯನ್ನು ಪಾರ್ಕ್‌ಗಾಗಿ ಇಡಬಹುದು. ಸೋಮೇಶ್ವರ ಗ್ರಾಮದ ಮನೆಗಳಿರುವ ಜಾಗ ಮನೆ ನಿವೇಶನಕ್ಕಿಟ್ಟು ಉಳಿದ ಜಾಗ ಕೈಗಾರಿಕೆಗೆ ಇಡಬಹುದು. ಈ ತಿದ್ದುಪಡಿ ಅತೀ ಅಗತ್ಯವಾಗಿರುತ್ತದೆ. ಈ ಕುರಿತು ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಈ ಮಾಸ್ಟರ್ ಪ್ಲಾನ್ ಮಾಡುವಾಗ ಪ್ಲಾನಿಂಗ್ ಅಥಾರಿಟಿಯವರು ಏನು ಮಾಡಬೇಕು. ಯಾವರೀತಿ ವಿನ್ಯಾಸಕೊಡಬೇಕೆಂದು ಸಾರ್ವಜನಿಕವಾಗಿ ಆಕ್ಷೇಪಣೆಗಳನ್ನು, ಸಲಹೆಗಳನ್ನು ಕೇಳುತ್ತಾರೆ. ಇವುಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಕೊನೇ ತೀರ್ಮಾನ ತೆಗೆದುಕೊಳ್ಳುತ್ತಾರೆ. ಯಾವ ಕಡೆ ಪಾರ್ಕ್ ಇರಬೇಕೆಂಬ ತುಲನಾತ್ಮಕ ದೃಷ್ಟಿಯಿಂದ ನಿಷ್ಕರ್ಷೆಗೆ ಬಂದಿರುತ್ತಾರೆ. ಗೆಜೆಟ್‌ನಲ್ಲಿಯೂ ಸಹ ಪ್ರಕಟ ಮಾಡಿರುತ್ತಾರೆ. ಅದನ್ನೆಲ್ಲಾ ಗಮನಿಸದೆ, ನಮಗೆ ಈಗ ತೊಂದರೆಯಾಗುತ್ತದೆ ಎಂದು ಹೇಳುವುದರಿಂದ ಏನೂ ಪ್ರಯೋಜನಕ್ಕೆ ಬರುವುದಿಲ್ಲ. ಈಗ ಊರು ಬೆಳೆಯುತಕ್ಕ ಕಡೆ ಆಟದ ಮೈದಾನ ಇದ್ದರೆ, ಸಾರ್ವಜನಿಕರ ಉಪಯೋಗಕ್ಕೆ ಬರುತಕ್ಕ ಜಾಗ ವಿಾಸಲಿಡತಕ್ಕದ್ದು ಅತ್ಯಂತ ಅವಶ್ಯಕ ಮಂಗಳೂರು ನಗರ ಬಹಳ ವೇಗದಲ್ಲಿ ಬೆಳೆಯುತ್ತಿದೆ ಈ ಕಾರಣದಿಂದ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈಗ ಫೈನಲೈಸ್ ಆಗಿ ಕೊನೇ ಘಟ್ಟವನ್ನು ಸೇರತಕ್ಕ ಸಮಯದಲ್ಲಿ ಏನು ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಆದರೂ ಕೂಡ ಅವರು ಬರವಣಿಗೆ ಮೂಲಕ ತಿಳಿಸಿದರೆ ಸಂಬಂಧಪಟ್ಟ ಅಧಿಕಾರಿಗಳೊಡನೆ ಸಮಾಲೋಚನೆ ಮಾಡಿ ಬದಲಾವಣೆ ಮಾಡಲಿಕ್ಕೆ ಏನಾದರೂ ಸಾಧ್ಯ ಇದೆಯೇ, ನೋಡಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

(3) ರಾಜ್ಯದ ಆರೋಗ್ಯ ಮಾರ್ಗದರ್ಶಿಗಳಿಗೆ ಗೌರವ ಧನವನ್ನು ಹೆಚ್ಚಿಸುವ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.—ಕರ್ನಾಟಕ ರಾಜ್ಯದಲ್ಲಿ ಸುಮಾರು ೩೫ ಸಾವಿರಕ್ಕೂ ಹೆಚ್ಚು ಸಮುದಾಯ ಆರೋಗ್ಯ ಮಾರ್ಗದರ್ಶಿಗಳು ಇದ್ದಾರೆ. ಅವರಿಗೆ ಮಾಸಿಯಾನ ಗೌರವ ಧನ ರೂ. ೫೦ನ್ನು ಮಾತ್ರ ನೀಡಲಾಗುತ್ತಿದೆ. ಇದು ತುಂಬಾ ಕಡಿಮೆ ಎಂದು ಪ್ರತಿಭಟಿಸಿ ಸುಮಾರು ಎರಡು ವರ್ಷ ಹೋರಾಟವನ್ನು ಅವರು ನಡೆಸುತ್ತಿದ್ದರೂ ಸರಕಾರ ಏನೂ ಪರಿಹಾರ ಕೊಡಲಿಲ್ಲ. ಈ ಒಂದು ಸಮಸ್ಯೆಯನ್ನು ಸರಕಾರ ತುರ್ತಾಗಿ ಪರಿಹರಿಸಿ ಕೊಡಬೇಕೆಂಬ ಉದ್ದೇಶದಿಂದ ಸದರಿ ಆರೋಗ್ಯ ಮಾರ್ಗದರ್ಶಿಗಳು ಧಾರವಾಡದಲ್ಲಿ ೧೪-೧೦-೧೯೮೫ರಿಂದ ಸದರಿ ಅನ್ನ ಸತ್ಯಾಗ್ರಹವನ್ನು ಕೈಗೊಂಡಿದ್ದರೂ ಸರಕಾರದವರು ಯಾವ ಒಂದು ಗಮನವನ್ನು ಕೊಡದೆ ಕಾಲ ತಳ್ಳುತ್ತಿದ್ದಾರೆ. ಈ ಬಗ್ಗೆ ಡಿ.ಸಿ.ಯವರನ್ನು ಕಂಡರೂ ಪರಿಹಾರ ಸಿಕ್ಕುತ್ತಿಲ್ಲ. ಈ ಬಗ್ಗೆ ಸದರಿ ಸಮುದಾಯ ಆರೋಗ್ಯ ಮಾರ್ಗದರ್ಶಿಗಳ ನ್ಯಾಯ ಕೋರಿಕೆಗಳನ್ನು ಈಡೇರಿಸುವುದು ಬಹಳ ಮುಖ್ಯ. ಇದು ಸಾರ್ವಜನಿಕ ಮಹತ್ವದ ವಿಷಯವಾಗಿದ್ದು ಈ ಒಂದು ವಿಷಯವನ್ನು ಸದನದ ಮುಂದೆ ಸರಕಾರದ ಗಮನಕ್ಕೆ ತರಲು ಅನುಮತಿ ಕೋರುತ್ತೇನೆ ಮತ್ತು ಇವರ ನ್ಯಾಯವಾದ ಬೇಡಿಕೆಗಳನ್ನು ಸರಕಾರ ಒಪ್ಪಿ ಪರಿಹಾರ ಕೊಡುವುದರ ಬಗ್ಗೆ, ತುರ್ತಾ ಕ್ರಮದ ಬಗ್ಗೆ ಹೇಳಿಕೆ ಕೊಡಬೇಕೆಂದು ಕೋರುತ್ತೇನೆ.